ಡಾ.ರಾಜೇಂದ್ರ ನಾಯಕ್ ಆಶಯ | ಆಂಗ್ಲಭಾಷಾ ಪ್ರಯೋಗಾಲಯ ಉದ್ಘಾಟನೆ

# ಭಾಷೆಯ ಪರಿಣಾಮಕಾರಿ ಬಳಕೆ ಅವಶ್ಯ

■ ವಿಜಯವಾಣಿ ಸುದ್ದಿಜಾಲ ಕಾರ್ಕಳ

ಭಾಷೆಯ ಗುಲಾಮರಾಗುವುದಲ್ಲ. ಬದಲಿಗೆ ಭಾಷೆಯನ್ನು ಚೆನ್ನಾಗಿ ಬಳಸಿ ಪರಿಣಾಮಕಾರಿಯಾಗಿ ಸಂವಹನ ಮಾಡಬೇಕು. ಭಾಷೆಯ ಅಂತರಾಳ ಅರ್ಥಮಾಡಿಕೊಳ್ಳಬೇಕು ಎಂದು ಕೋಟೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಾ.ರಾಜೇಂದ್ರ ನಾಯಕ್ ಹೇಳಿದರು.

ಮಂಜುನಾಥ ಪೈ ಸ್ಮಾರಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ರೂಸಾ(ರಾಷ್ಟ್ರೀಯ ಉಚ್ಚತರ ಶಿಕ್ಷಾ ಅಭಿಯಾನ) ಯೋಜನೆಯಡಿ ಮಂಜೂರಾದ ಅನುದಾನದಲ್ಲಿ ನಿರ್ಮಾಣಗೊಂಡ ಆಂಗ್ಲಭಾಷಾ ಪ್ರಯೋಗಾಲಯ ಉದ್ಘಾಟಿಸಿ ಮಾತನಾಡಿದರು.

ಕಾಲೇಜು ವಿದ್ಯಾರ್ಥಿಗಳು ಭಾಷಾ ಪ್ರಯೋಗಾಲಯದಿಂದ ಪ್ರಯೋಜನ ಪಡೆಯಬೇಕು. ಭಾಷೆಯನ್ನು ಸರಿಯಾಗಿ ಬೆಳೆಸಿದರೆ ಯಶಸ್ವಿ ವ್ಯಕ್ತಿಯಾಗಬಹುದು. ಇಂಗ್ಲಿಷ್ ಜಾಗತಿಕ ಮಟ್ಟದಲ್ಲಿ ಬೆಳೆದ ಭಾಷೆ. ಸುಮಾರು 1066ರ ಕಾಲಘಟ್ಟದಲ್ಲಿ 15 ಲಕ್ಷ ಜನ ಮಾತ್ರ ಮಾತನಾಡುತ್ತಿದ್ದ ಆಂಗ್ಲಭಾಷೆ, 1962ರಲ್ಲಿ 30 ಕೋಟಿಗೆ ಏರಿಕೆಯಾಗಿತ್ತು. ಇಂಗ್ಲಿಷ್ ಅಕ್ಷರಮಟ್ಟಿಗೆ ಜಾಗತಿಕವಾಗಿ ಹರಡಿದೆ ಎಂದು ಅಭಿಪ್ರಾಯಪಟ್ಟರು. ಗ್ರೀಸ್ ದೇಶದಲ್ಲಿನ ಗೂನುಬೆನ್ನಿನ ಡೆಮೊಸ್ತಾನೀಸ್ ಎಂಬಾತ ತನ್ನ ತೊದಲಿನ ಸಮಸ್ಯೆ ಮೆಟ್ಟಿನಿಂತು ವಿಶ್ವವಿಖ್ಯಾತ ವಾಗ್ಮಿಯಾದ ಕಥೆಯನ್ನು ಹೇಳುವ ಮೂಲಕ ವಿದ್ಯಾರ್ಥಿಗಳಿಗೆ ಕಠಿಣ ಶ್ರಮ ಹಾಗೂ ಛಲದಿಂದ ಗುರಿ ತಲುಪುವ ಬಗೆಯನ್ನು ಡಾ.ನಾಯಕ್ ವಿವರಿಸಿದರು.

ಪ್ರಾಂಶುಪಾಲ ಶ್ರೀವರ್ಮ ಅಜ್ರಿ ಅಧ್ಯಕ್ಷತೆವಹಿಸಿ ಮಾತನಾಡಿದರು.

ಆಂಗ್ಲ ಭಾಷಾ ವಿಭಾಗ ಮುಖ್ಯಸ್ಥ ಯೋಗೀಶ್ ಡಿ.ಎಚ್. ಮಾತನಾಡಿ, ಪ್ರಾಯೋಗಿಕ ಕಲಿಕೆ ಮೂಲಕ ವಿದ್ಯಾರ್ಥಿಗಳಿಗೆ ಲ್ಯಾಬ್‌ನಲ್ಲಿ ಇಂಗ್ಲಿಷ್ ಕಲಿಸಲಾಗುತ್ತದೆ. ಕೇಳುವುದು, ಮಾತನಾಡುವುದು, ಓದುವುದು ಹಾಗೂ ಬರೆಯುವುದು ಈ ನಾಲ್ಕು ವಿಧಾನಗಳ ಮೂಲಕ ಹೊಸ ಭಾಷೆ ಕಲಿಯಬಹುದು ಎಂದರು.

ಶರಣ್ಯ ಪ್ರಾರ್ಥಿಸಿದರು. ವಾಣಿಜ್ಯ ವಿಭಾಗ ಮುಖ್ಯಸ್ಥೆ ಜ್ಯೋತಿ ಎಲ್. ಜನ್ನೆ ಉಪಸ್ಥಿತರಿದ್ದರು. ಸಹಾಯಕ ಪ್ರಾಧ್ಯಾಪಕಿ ಸಂಧ್ಯಾ ಭಂಡಾರಿ ಸ್ವಾಗತಿಸಿದರು. ಸಹಾಯಕ ಪ್ರಾಧ್ಯಾಪಕಿ ದಿವ್ಯಾ ಪ್ರಭು ವಂದಿಸಿದರು.

## ಭಾಷಾ ಪ್ರಯೋಗಾಲಯದಲ್ಲಿ ಏನೇನು ಇರಲಿವೆ?

**ಸುಮಾರು 10 ಲಕ್ಷ ರೂ. ವೆಚ್ಚದಲ್ಲಿ ರೂಸಾ ಅನುದಾನದಲ್ಲಿ ಪ್ರಯೋಗಾಲಯ ನಿರ್ಮಿಸಲಾಗಿದೆ. ಪ್ರಯೋಗಾಲಯದಲ್ಲಿ 20 ಕಂಪ್ಯೂಟರ್‌ಗಳಿದ್ದು, ಪ್ರತಿಯೊಂದು ಕಂಪ್ಯೂಟರಿಗೂ ಆಂಗ್ಲ ಭಾಷಾ ಕಲಿಕಾ ಸಾಫ್ಟ್‌ವೇರ್ ಅಳವಡಿಸಲಾಗಿದೆ. ಇಲ್ಲಿ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ತರಬೇತಿ ಕೊಡಲಾಗುತ್ತದೆ.**

ವಿಜಯವಾಣಿ 06/09/2019